ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಂಕರಲಿಂಗೇಗೌಡರು ಪ್ರಸ್ತಾಪ ಮಾಡಿರುವಂತೆ, ಅವರ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯ ಸಿ.ಅಂಡ್ ಆರ್. ರೂಲ್ಸ್‌ಗೆ ಸರ್ಕಾರದಿಂದ ಅಪ್ರೂವಲ್ ಕೊಡಬೇಕು ಎಂದು. ದಿನಾಂಕ 28-2-2001ರಲ್ಲಿ ಅವರು ಡ್ರಾಫ್ಟ್ ರೂಲ್ಸ್ ಏನು ಕಳುಹಿಸಿದ್ದರು ಅದಕ್ಕೆ ನಾವು 22-4-2003 ರಲ್ಲಿ ಅಪ್ರೂವಲ್ ಕೊಟ್ಟು ಕಳುಹಿಸಿ ಕೊಟ್ಟಿದ್ದೆವು, ಆದರೆ ಪುನಃ ಏಪ್ರಿಲ್‌ನಲ್ಲಿ ಅದು ಸರಿಯಿಲ್ಲ, ಎರರ್ ಇದೆ ಅದೂ ಕೂಡ ಬದಲಾವಣೆ ಮಾಡಬೇಕೆಂದು ಅವರಿಗೆ ಡೈರೆಕ್ಷನ್ಸ್ ಕೊಟ್ಟಿತ್ತು, ಮೊನ್ನೆ 3-6-2003ರಲ್ಲಿ ತಾವು ಏನು ಕೊಟ್ಟಿದ್ದೀರಿ ಆ ಪ್ರಕಾರ ಲೋಕಲ್ ಇಂಜಿನಿಯರ್ಸ್ ಗೆ ಶೇಕಡ 40, ಡೆಪ್ಯೂಟೇಷನ್ ಮೂಲಕ ಶೇಕಡ 60ರಷ್ಟು ಪಿ.ಡಬ್ಲ್ಯೂ.ಡಿ.ಗೆ ಎಂದು ಕೊಟ್ಟಿದ್ದೆವು. ತಾವು ಮತ್ತೆ ಅದನ್ನು ಶೇಕಡ 75ರಷ್ಟು ಮಾಡಬೇಕೆಂದು ಇನ್ನೊಂದು ರಿಕ್ವೆಸ್ಟ್ ಕೊಟ್ಟಿದ್ದೀರಿ. ಹಾಗಾಗಿ ಶೇಕಡ 75ರಷ್ಟು ಸರ್ಕಾರ ಮಾಡಿದರೆ ಇಡೀ ರಾಜ್ಯದಲ್ಲಿ ಎಲ್ಲಾ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಗೆ ಒಂದೇ ಕಾನೂನು ಮಾಡಬೇಕಾಗುತ್ತದೆ, ಮೈಸೂರಿಗೆ ಬಂತು. ತುಮಕೂರಿಗೆ ಒಂದು ನಾವು ಮಾಡಲಿಕ್ಕೆ ಆಗುವುದಿಲ್ಲ, ಹಾಗಾಗಿ ತಾವೇನು ಕೊಟ್ಟಿದ್ದೀರಿ ಅದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಹಿಂದೆ ನಾವು ನೀಡಿರುವಂತೆ ಶೇಕಡ 60 ಹಾಗೂ 40 ಕ್ಕೆ ತಾವು ಒಪ್ಪಿಕೊಳ್ಳುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ ನಾವು ಈಗಾಗಲೇ ಅದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ. ತಾವು ಮೂಲಭೂತವಾಗಿ ನೌಕರರಿಗೆ ಅನುಕೂಲವನ್ನು ಮಾಡಿಕೊಡಿ ಎಂದು ಕೇಳಿರುವ ವಿಚಾರದಲ್ಲಿ ಸರ್ಕಾರದ ಚಿಂತನೆ ಇದೆ, ನಮ್ಮ ಅಭಯ ಹಸ್ತ ಸಂಪೂರ್ಣವಾಗಿ ಮೈಸೂರಿನ ಮೇಲೂ ಇದೆ, ನಿಮ್ಮ ಮೇಲೂ ಇದೆ.

ಉತ್ತರ ಕರ್ನಾಟಕದ ಪಟ್ಟಣ ಮತ್ತು ನಗರಗಳ ಸಮಗ್ರ ಅಭಿವೃದ್ಧಿಗೆ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವು

592 (5268) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ(ತಿಕೋಟ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದ ಪಟ್ಟಣ ಮತ್ತು ಸಮಗ್ರ ಅಭಿವೃದ್ಧಿಗಾಗಿ ಏಷ್ಯಾ ಬ್ಯಾಂಕಿನಿಂದ ನೆರವು ಕಲ್ಪಿಸಲಾಗಿದೆಯೇ?

ಆ) ಉತ್ತರ ಕರ್ನಾಟಕದ ಯಾವ ನಗರ ಮತ್ತು ಪಟ್ಟಣಗಳನ್ನು ಈ ನೆರವಿನಿಂದ ಅಭಿವೃದ್ಧಿ ಪಡಿಸಲಾಗುವುದು?

ಇ) ಏಷ್ಯಾ ಅಭಿವೃದ್ಧಿ ಬ್ಯಾಂಕಿನ ನೆರವನ್ನು ಬಳಸಿಕೊಂಡು ಉತ್ತರ ಕರ್ನಾಟಕದ ನಗರ ಮತ್ತು ಪಟ್ಟಣಗಳಲ್ಲಿ ಯಾವ ಕೆಲಸಗಳನ್ನು ಕೈಗೊಂಡು ಅಭಿವೃದ್ಧಿ ಪಡಿಸಲಾಗುವುದು?

ಈ) ಏಷ್ಯಾ ಅಭಿವೃದ್ಧಿ ಬ್ಯಾಂಕಿನಿಂದ ಒದಗಿಸಲಾಗಿರುವ ನೆರವಿನ ಮೊತ್ತವೆಷ್ಟು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಇನ್ನು ಇಲ್ಲ. ಆದರೆ 2003-04ನೇ ಆಯವ್ಯಯ ಭಾಷಣದಲ್ಲಿ ಉತ್ತರ ಕನ್ನಡದ 20 ಪಟ್ಟಣಗಳನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನೊಂದಿಗೆ ಅಭಿವೃದ್ಧಿ ಪಡಿಸಲಾಗುವುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಪ್ರಕಟಿಸಿದ್ದಾರೆ. ಅದರಂತೆ ಈ ಬಗ್ಗೆ ಪ್ರಾರಂಭಿಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಇನ್ನು ನಿರ್ಧಾರವಾಗಿಲ್ಲ.

ಇ) ಇನ್ನು ನಿರ್ಧರಿಸಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. ನಾನು ಅರ್ಬನ್ ಇನ್ ಫ್ರಾಸ್ಟ್ರಕ್ಚರ್ ಡೆವಲಪ್ ಮೆಂಟ್ ಪ್ರೋಗ್ರಾಮ್ ನಲ್ಲಿ ಉತ್ತರ ಕರ್ನಾಟಕದ ಭಾಗ ಇನ್ನೂವರೆಗೆ ಇನ್ ಕ್ಲೂಡ್ ಆಗಿಲ್ಲ ಎನ್ನುವುದೇ ಈ ಪ್ರಶ್ನೆಯ ಮೂಲ ಉದ್ದೇಶ. ಈಗಾಗಲೇ ಅವರು ಏಷಿಯನ್ ಡೆವಲಪ್ ಮೆಂಟ್ ಬ್ಯಾಂಕ್ ನಿಂದ ಎ.ಡಿ.ಬಿ.–1 ಮತ್ತು 2 ಎರಡನ್ನೂ ಸ್ಯಾಂಕ್ಷನ್ ಮಾಡಿಕೊಂಡಿದ್ದಾರೆ. ಎ.ಡಿ.ಬಿ.–1ರಲ್ಲಿ 500 ಕೋಟಿ ರೂ.ಗಳನ್ನು ತಂದಿದ್ದಾರೆ. ಎ.ಡಿ.ಬಿ.–2ರಲ್ಲಿ 1050 ಕೋಟಿ ರೂ.ಗಳನ್ನು ತಂದಿದ್ದಾರೆ, ಎರಡೂ ಹಣ ಒಂದೇ ಡಿವಿಷನ್‌ಗೆ ಹೋಗಿದೆ, ಮೈಸೂರು, ಬೆಂಗಳೂರು, ಮಂಗಳೂರು ಇವೆಲ್ಲಾ ಮೈಸೂರು ಡಿವಿಷನ್ ಗೆ ಹೋಗಿದೆ. ನಮ್ಮ ಹಳೆಯ ವರದಿ ಪ್ರಕಾರ ಯಾವುದು 4 ಡಿವಿಷನ್‌ಗಳು ರಾಜಧಾನಿಯಲ್ಲಿ ಇದ್ದವು, ಅದರಲ್ಲಿ ಯಾವುದೂ ಈ ಡಿವಿಷನ್‌ಗಳಿಗೆ ಎ.ಡಿ.ಬಿ.ಫಂಡ್ ಇನ್ ಫ್ರಾಸ್ಟ್ರಕ್ಚರ್ ಡೆವಲಪ್ ಮೆಂಟ್‌ಗಾಗಿ ಸಿಗುತ್ತಿಲ್ಲ. ಆದ್ದರಿಂದ ಈ ಉತ್ತರ ಕರ್ನಾಟಕ ಭಾಗಕ್ಕೆ ನಿಮ್ಮ ಆಯವ್ಯಯ ಭಾಷಣದಲ್ಲಿ ಈ ವರ್ಷ ತೆಗೆದುಕೊಳ್ಳುತ್ತೇವೆಂದು ಕೂಡ ಹೇಳಿದ್ದೀರಿ, ಆದರೆ ಉತ್ತರದಲ್ಲಿ ಇನ್ನೂ ನಿರ್ಧಾರವಾಗಿಲ್ಲ, ಉದ್ಭವಿಸುವುದಿಲ್ಲ ಎಂದು ಬಂದಿದೆ. ಇದರಲ್ಲಿ ಯಾವುದು ಸರಿ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಶಿವಾನಂದ ಪಾಟೀಲ್ ರವರು ತುಂಬಾ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಈ ಏಷ್ಯಾ ಅಬಿವೃದ್ಧಿ ಬ್ಯಾಂಕ್ ನಿಂದ ಈಗಾಗಲೇ ಎರಡು ಪ್ರಾಜೆಕ್ಟ್ ಗಳು ಇಂಪ್ಲಿಮೆಂಟ್ ಆಗಿದೆ, ಒಂದು ತುಮಕೂರು, ಮೈಸೂರು, ಮತ್ತೊಂದು ತಾವು ಹೇಳಿದ ಹಾಗೆ ಒಂದೇ ಡಿವಿಷನ್ ಎಂದು ಅಲ್ಲ, ಕರಾವಳಿ ಪ್ರದೇಶದ ಅಭಿವೃದ್ಧಿಗಾಗಿ ತಾವು ಹೇಳಿದ ಹಾಗೆ ಸರಿ ಸುಮಾರು ಸಾವಿರ ಕೋಟಿ ರೂಪಾಯಿಗಳು, ತುಮಕೂರು, ಮಂಡ್ಯ ಚನ್ನಪಟ್ಟಣ, ರಾಮನಗರ ಈ ಯೋಜನೆಗಳಿಗೆ ಸುಮಾರು 500 ಕೋಟಿ ರೂ.ಗಳನ್ನು ಒದಗಿಸಿದ್ದು ಈಗಾಗಲೇ ಮೊದಲನೇ ಫೇಸ್ ನ್ನು ಮುಗಿಸಿದ್ದೇವೆ. ಇನ್ನು ಮೂರನೇ ಫೇಸ್‌ಗಾಗಿ ಏಷ್ಯನ್ ಡೆವಲಪ್ ಮೆಂಟ್ ಬ್ಯಾಂಕ್ ಗೆ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಾರ್ಥನೆ ಮಾಡಿದ್ದು, ಕೇಂದ್ರ ಸರ್ಕಾರದವರು ಈ ಪ್ರಾಜೆಕ್ಟ್ ನ್ನು ಎ.ಡಿ.ಬಿ.ಗೆ ಕಳುಹಿಸಿಕೊಡಬೇಕು, ಎ.ಡಿ.ಬಿ. ಯವರು ಪುನಃ ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಪ್ಪಿಗೆಯನ್ನು ಸೂಚಿಸಬೇಕು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಬರೆಯಬೇಕು. ಈ ಪ್ರಕ್ರಿಯೆಗಳೆಲ್ಲಾ ಮುಗಿದು ಈಗ ಎ.ಡಿ.ಬಿ. ಹಾಗೂ ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ರಾಜ್ಯ ಸರ್ಕಾರವು ಈ ಪ್ರಿಲಿಮಿನರಿ ಕೆಲಸಗಳನ್ನು ಮಾಡಿ ಎಂದು ಆದೇಶ ನೀಡಿದೆ. ಈಗ ನಾವು

12.00 ಪಿ ಎಂ

ಆ ಪ್ರಿಲಿಮಿನರಿ ಕೆಲಸಗಳನ್ನು ಮಾಡುತ್ತಿದ್ದೇವೆ. ಆ ಕೆಲಸ ಆಗುತ್ತದೆ ಎನ್ನುತಕ್ಕಂಥ ವಿಶ್ವಾಸ ಇದೆ. ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳು 2003–04ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದರು, ಆ ಪ್ರಸ್ತಾವವನ್ನು ಮುಖ್ಯ ಕಾರ್ಯದರ್ಶಿಯವರು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೇಂದ್ರಸರ್ಕಾರ ಎ.ಡಿ.ಬಿ.ಗೆ ಕಳುಹಿಸಿ, ಪುನಃ ಎ.ಡಿ.ಬಿ.ಯಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಕ್ಕೆ ಬಂದು ಈಗ ಪ್ರಿಲಿಮಿನರಿ ವರ್ಕ್ಸ್ ಮಾಡುವುದಕ್ಕೆ ಬರೆದಿದ್ದಾರೆ. ಆಮೇಲೆ ನಗರಗಳನ್ನು ಆಯ್ಕೆ ಮಾಡಿಕೋಳ್ಳುತ್ತೇವೆ ಮತ್ತು ಅದಕ್ಕೆ ಬೇಕಾದಂಥ ಹಣವನ್ನು ಒದಗಿಸಿಕೊಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾವು ಮಾಡುತ್ತೇವೆ ಎಂದು ಹೇಳಿದ್ದೀರಿ. ಅದಕ್ಕಾಗಿ ನಾನು ಸಂತೋಷ ವ್ಯಕ್ತಪಡಿಸುತ್ತೇನೆ. ಏಕೆಂದರೆ ಈಗ ನಿಮಗೆ ಗೊತ್ತಿದೆ, ಈಗಾಗಲೇ ಕೆ.ಎಂ.ಆರ್.ಪಿ. ಅಂದರೆ ಕರ್ನಾಟಕ ಮುನಿಸಿಪಲ್ ಡಿಫಾರ್ಮ್ಸ್ ಪ್ರಾಜೆಕ್ಟ್‌ನಲ್ಲಿ ಐದುನೂರು ಕೋಟಿ ರೂಪಾಯಿಗಳನ್ನು ತಂದಿದ್ದೀರಿ. ಆಮೇಲೆ ಕಾಸಿಕ್ಸ್ ನಲ್ಲಿ ಇನ್ನೂರು ಕೋಟಿ ತಂದಿದ್ದೀರಿ. ADB projects have not been taken in Northern Karnataka. My preliminary submission is that whether you are surely taking it up in 2003-04? This is my first basic question and the amount which you are earmarking for this. ಏಕೆಂದರೆ ಉತ್ತರ ಕರ್ನಾಟಕದಲ್ಲಿ ಎಂಟು–ಹತ್ತು ಜಿಲ್ಲೆಗಳು ಬರುತ್ತವೆ. ಈಗ 1500 ಕೋಟಿ ರೂ.ಗಳನ್ನು ಇಟ್ಟುಕೊಂಡು ಮತ್ತು ಇದು 700 ಕೋಟಿ ರೂ. ಎಂದರೆ ಎರಡು ಸಾವಿರ ಕೋಟಿ ರೂ.ಗಳವರೆಗೆ ನೀವು ಖರ್ಚು ಮಾಡಿದರೆ ಉತ್ತರ ಕರ್ನಾಟಕಕ್ಕೆ ಎಷ್ಟು ಹಣವನ್ನು ನಿಗದಿಮಾಡಿದ ಹಾಗೆ ಆಯಿತು?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಮೊದಲೇ ಹೇಳಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಪೂರ್ಣವಾದಂಥ ಸಮ್ಮತಿ ಮಾತ್ರವಲ್ಲ ಸಪೋರ್ಟ್ ಕೂಡ ಸಿಕ್ಕಿದೆ. ಅದು ನಮಗೆ ಬಹಳ ಮುಖ್ಯವಾಗಿರತಕ್ಕಂಥಾದ್ದು. ಏಕೆಂದರೆ ನೇರವಾಗಿ ರಾಜ್ಯ ಸರ್ಕಾರವೇ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಇದು ರೀಜನಲ್ ಇಂಬ್ಯಾಲೆನ್ಸ್ ಆಗುವುದಿಲ್ಲವೇನು? 2001ಕ್ಕೆ ನೀವು ಫಂಡ್ಸ್‌ನ್ನು ಬಾರೋ ಮಾಡುತ್ತಿದ್ದೀರಿ. 2001 ರಿಂದ ಬಾರೋ ಮಾಡಿದ್ದು 2200 ಕೋಟಿ ರೂ. ದಾಟಿದೆ. ಒಂದು ಕಡೆ ಆಯೋಗವನ್ನು ಕೂಡ ರಚಿಸುತ್ತೀರಿ. ಇದರಲ್ಲಿ ಉತ್ತರ ಕರ್ನಾಟಕಕ್ಕೆ ಯಾವುದೇ ರೀತಿಯಿಂದ ನಿರ್ದಿಷ್ಟವಾದ ಉತ್ತರವನ್ನು ತಾವು ಕೊಡದೇ ಇದ್ದರೆ ಅದು ಅನ್ಯಾಯ ಆಗುವುದಿಲ್ಲವೆ? ಒಂದು ರೀಜನಲ್ ಇಂಬ್ಯಾಲೆನ್ಸ್ ಆಗುವುದಿಲ್ಲವೇನು?

ಶ್ರೀ ಡಿ.ಬಿ. ಚಂದ್ರೇಗೌಡ : ಡಾ॥ ನಂಜುಂಡಪ್ಪ ವರದಿಗೂ, ಏಷಿಯನ್ ಅಭಿವೃದ್ಧಿ ಬ್ಯಾಂಕಿನಿಂದ ಬರತಕ್ಕಂಥ ಸಾಲಕ್ಕೂ ಸಂಬಂಧವನ್ನು ಕಲ್ಪಿಸುವುದು ಸರಿಯಲ್ಲ ಈಗ ಫಸ್ಟ್ ಫೇಸ್ ಸೆಕೆಂಡ್ ಫೇಸ್ ಥರ್ಡ್‌ಫೇಸ್ ಎಂದು ತೆಗೆದುಕೊಂಡಿದ್ದೇವೆ. ಈಗ ಫಸ್ಟ್ ಪೇಸ್ ಹೆಚ್ಚು ಕಡಿಮೆ ಮುಕ್ತಾಯದ ಹಂತದಲ್ಲಿದೆ. ಅದು 2004ಕ್ಕೆ ಮುಗಿಯುತ್ತದೆ. ಸೆಕೆಂಡ್ ಫೇಸ್ ನ್ನು ಈಗ ಪ್ರಾರಂಭ ಮಾಡಿದ್ದೇವೆ. ಕರಾವಳಿ ಪ್ರದೇಶ ಅಂದರೆ ಅದು ಮಂಗಳೂರಿನಿಂದ ಹಿಡಿದು ಉತ್ತರ ಕರ್ನಾಟಕದ ಕೆಲವು ಪ್ರದೇಶಗಳವರೆಗೆ ಇದೆ. ಇನ್ನು ಥರ್ಡ್ ಫೇಸ್ ಬಗ್ಗೆ ನಾನು ಈಗಾಗಲೇ ಹೇಳಿದೆ. ಈಗಾಗಲೇ ಪ್ರಪೋಸಲ್ ನ್ನು ಕಳುಹಿಸಿದ್ದೇವೆ. ಪ್ರಪೋಸಲ್‌ನ್ನು ಕಳುಹಿಸುವುದು ಮಾತ್ರವಲ್ಲ, ಕೇಂದ್ರಸರ್ಕಾರ ಅದಕ್ಕೆ ಸಂಪೂರ್ಣವಾದಂಥ ಸಹಮತಿ ಮತ್ತು ಬೆಂಬಲವನ್ನು ಕೊಟ್ಟಿದೆ. ಆ ಬೆಂಬಲದಿಂದಾಗಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ನವರು ಹಣ ಕೊಡುವುದಕ್ಕೆ ಸಮ್ಮತಿಸಿದ್ದಾರೆ. ಇನ್‌ಫ್ರಾ ಸ್ಟ್ರಕ್ಚರ್ ಡೆವಲಪ್ ಮೆಂಟ್ ಮಾಡುವುದಕ್ಕೆ ಕರ್ನಾಟಕ ಸರ್ಕಾರ ಈಗಾಗಲೇ ಅದನ್ನು ಕೈಗೆತ್ತಿಕೊಂಡಿದೆ. ಆದ್ದರಿಂದ ಕೈಗೆ ತೆಗೆದುಕೊಂಡಿರುವ ಕೆಲಸವನ್ನು ಈಗ ನೀವು ಇಂಬ್ಯಾಲೆನ್ಸ್ ಆಗುತ್ತದೆ ಎಂದು ಹೇಳಿದರೆ ಹೇಗೆ? ಮೂರನೇ ಫೇಸ್ ನಲ್ಲಿ ಇನ್ನೂ 20 ನಗರಗಳು ಆ ಭಾಗದಿಂದ ಬರುತ್ತವೆ. ಅದರಲ್ಲಿ ಯಾವ ಶಂಕೆಯನ್ನೂ ಇಟ್ಟುಕೊಳ್ಳಬೇಡಿ. ಕೇಂದ್ರ ಸರ್ಕಾರ ಕೂಡ ಒಪ್ಪಿಕೊಂಡಿದೆ. ಅದರ

ಜೊತೆಗೆ ಸಾಲ ಕೂಡ ಬರುತ್ತದೆ. ಅದರಲ್ಲಿ ಇರತಕ್ಕಂಥ ನಿಬಂಧನೆಗಳ ಪ್ರಕಾರ ಅಭಿವೃದ್ಧಿಯ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಈ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೇ, 5.8.2003ರಂದು ಲಿಖಿತ ಮೂಲಕ ಉತ್ತರಿಸುವ 108 ಪ್ರಶ್ನೆಗಳ ಪೈಕಿ 78 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : *ಮಂಡಿಸಲಾಯಿತು.* (ಅನುಬಂಧ–1)

ಶ್ರೀ ಅರಗ ಜ್ಞಾನೇಂದ್ರ : ನಮ್ಮ ಚುಕ್ಕೆ ಗುರುತಿನ ಪ್ರಶ್ನೆಗಳ ಗತಿ ಏನಾಯಿತು?

ಅಧ್ಯಕ್ಷರು : ಇನ್ನೂ ನಾಲ್ಕು ದಿವಸ ಸಮಯ ಇದೆ.

ಶ್ರೀ ಅರಗ ಜ್ಞಾನೇಂದ್ರ : ಹತ್ತನೇ ತಾರೀಖಿನ ಚುಕ್ಕಿ ಗುರುತಿನ ಪ್ರಶ್ನೆಗೆ ಉತ್ತರ ಇನ್ನೂ ಬಂದಿಲ್ಲ.

ಅಧ್ಯಕ್ಷರು : ಇಲ್ಲಿ ಕೇಳಬೇಡಿ. ತಾವು ಎದ್ದರೆ ಎಲ್ಲರೂ ಎದ್ದೇಳುತ್ತಾರೆ. ನನ್ನ ಚೇಂಬರ್‌ಗೆ ಬನ್ನಿ. ಅದಕ್ಕೆ ಏನು ಉಪಾಯವೆಂದು ಹುಡುಕೋಣ. ಇನ್ನು ಮುಂದೆ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

I **ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಮಂತ್ರಿ): (ಮುಖ್ಯಮಂತ್ರಿ ಅವರ ಪರವಾಗಿ)** ಮಾನ್ಯ ಅಧ್ಯಕ್ಷರೇ,

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಅಧಿನಿಯಮ 12(7) ರನ್ವಯ:

1. ಶ್ರೀ ಪಿ.ಎನ್. ಗುರುಮೂರ್ತಿ, ಜಿಲ್ಲಾ ವಾರ್ತಾಧಿಕಾರಿ, ಮೈಸೂರು ವಿಭಾಗ, ಮೈಸೂರು, ಇವರ ವಿರುದ್ಧ – ಲೋಕಾಯುಕ್ತ ಅವರ ವರದಿ ಮತ್ತು ಶಿಫಾರಸ್ಸುಗಳಿಗೆ ಸಂಬಂದಿಸಿದಂತೆ ವಿಶೇಷ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

II **ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು):** ಮಾನ್ಯ ಅಧ್ಯಕ್ಷರೇ, **1980** ಕಾಡಾ ಅಧಿನಿಯಮ **25**ನೇ ಕಲಂ ಮೇರೆಗೆ:

2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣ ಮೇಲ್ದಂಡ ಯೋಜನೆ ಭೀಮರಾಯನಗುಡಿ, ಗುಲ್ಬರ್ಗಾ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

III **ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು): (ಗ್ರಾಮೀಣಾಭಿವೃದ್ಧೀ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)** ಮಾನ್ಯ ಅಧ್ಯಕ್ಷರೆ,

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ: